


ಒಟ್ಟು ಆರು ಜನರ ತಂಡವನ್ನು ಒಳಗೆ ಹಾಕಿದ್ದ. ಎಲ್ಲರೂ ಅರೆಸ್ಟ್ ಆದ್ಮೇಲೆ ಸುದ್ದಿ ಹೊರಗೆ ಬಂದಿದ್ದು. ಇದಕ್ಕೀಗ ಜಾಮೀನು ಶಿಕ್ಕದೂ ಕಷ್ಟವೇಯ. ಬೇಕಾದ್ರೆ ಪ್ರಯತ್ನ ಮಾಡನ' ಎಂದೆಲ್ಲ ಗಿರಿಧರ ಹೇಳುತ್ತಿದ್ದರೂ ನಾನಂತೂ ನಂಬಲಾರದೆ ಕುಳಿತಿದ್ದೆ.

ಕನ್ನಡವನ್ನೇ ಕಲಿಯದವನಿಗೆ ಊರಿನ ಹುಡುಗರ ಸಖ್ಯ ಹೇಗೆ ಬೆಳೆಯಿತು? ಹೇಗೂ ಬೆಳೆದೀತು ಬಿಡಿ, ಆದರೆ ಅಷ್ಟೊಂದು ನಿಯತ್ತಿನ ಮನುಷ್ಯ ಇಂಥಾ ಹಡಬೆ ದಂಧೆಗೆ ಇಳಿದನೆಂದರೆ... ಯಾಕೆ ಎಂಬುದು ಬೇಕಲ್ಲ. 'ದುಡ್ಡು! ಹಡ್ಬೆ ದಂಧೆ ಆದ್ರೇನು? ಬಂದಷ್ಟು ಬಂತು. ದುಡ್ಡು ಯಾರಿಗೆ ಬ್ಯಾಡ?' ಎಂಬ ಗಿರಿಧರನ ಪ್ರಶ್ನೆಗೆ ನನ್ನಲ್ಲಿ ಉತ್ತರ ಇರಲಿಲ್ಲ. ಹಣದ ಅಗತ್ಯ ಅವನಿಗೆ ಇದ್ದಿದ್ದು ಹೌದು. ಆದರೂ ಇದನ್ನು ಒಪ್ಪಲು ಕಷ್ಟವಾಗುತ್ತಿತ್ತು. ಈಗ ಅಚ್ಚೆಗೆ ವಕೀಲರ ವ್ಯವಸ್ಥೆಯಾಗಬೇಕು, ಗಿರಿಧರನೇ ಇದ್ದಾನೆ. ಜೊತೆಗೆ ನಮ್ಮ ಜಮೀನಿಗೆ ಬದಲಿ ಜನ ಬೇಕಲ್ಲ. ಇನ್ಯಾರಿದ್ದಾರೆ ನಂಬಿಕೆಯ ಜನ? ಯಾರನ್ನ, ಹೇಗೆ ನಂಬುವುದು... ತಲೆಯೆಲ್ಲ ಕೆಟ್ಟು ಕೆಸರಾಗಿತ್ತು.

★★★

ನಮ್ಮ ಅಪಾರ್ಟ್‌ಮೆಂಟ್ ಅವ್ಯವಸ್ಥೆ ನಿಧಾನವಾಗಿ ಒಂದು ಹಂತಕ್ಕೆ ಬರಲಾರಂಭಿಸಿತ್ತು. ವಿದ್ಯುತ್ ಸಂಪರ್ಕ ಕಾಯಂಗೊಂಡಿತ್ತು. ಇದೇ ವೇಗದಲ್ಲಿ ನಡೆದರೆ, ಇನ್ನು ಹತ್ತು ವರ್ಷಗಳಲ್ಲಿ ಎಲ್ಲಾ ಸರಿಯಾಗಬಹುದೆಂಬ ಆಸೆ! ಆದರೆ ಜಮೀನಿಗೆ ಸರಿಯಾದ ಜನ ಸಿಗುತ್ತಿರಲಿಲ್ಲ. ಬಂದ ಒಬ್ಬಿಬ್ಬರು ಆರು ತಿಂಗಳೂ ಸರಿಯಾಗಿ ನಿಲ್ಲಲಿಲ್ಲ. ಇತ್ತ, ಅಚ್ಚೆಯ ಕೇಸು ನಡೆಯುತ್ತಿದೆ. ತನಗೆ ಸರಿಯಾಗಿ ತಿಳಿಯದ ಭಾಷೆಯಲ್ಲಿ ಏನೇನೊ ಹೇಳಿ ಯಾವುದೋ ಪೆಟ್ಟಿಗೆ ಕೊಟ್ಟಿದ್ದರು. ಅದನ್ನು ತಾನು ಇನ್ನೊಬ್ಬನಿಗೆ ಕೊಡುವಾಗ ಹಿಡಿದರು ಎಂದಷ್ಟೇ ಆತ ನನ್ನಲ್ಲಿ ಹೇಳಿದ್ದ. ಹೌದಾಗಿರಬಹುದು ನನ್ನ